# ಪರಿತಾಪ ಸಂತಾಪಗಳ ನಡುವೆ ಹಾರಿಹೋದ ಪ್ರಾಣಪಕ್ಷಿ

ಕೈಗೆ ಕಾಸು ಸಿಕ್ಕಿದ್ದೇ ತಡ ಹೊರಗೆ ಕಾಲಿಟ್ಟನಾದರೂ ಶಿವಣ್ಣನ ಅಂಗಡಿಗೆ ಹೋದರೆ ಹಳೆ ಸಾಲ ತೀರಿಸ್ಕೊತನೆ ಅನ್ನಿಸಿ, ಇನ್ನೊಂದು ಕಡೆ 'ಕಾಸು ಕೈಲಿದ್ರೆ ನೀನು ಊರೊಳಗಿರ ಐನೋರಂಗ್ಡಿಗೆ ಹೋಗ್ತಿಯ' ಅಂತ ಆಗಾಗ ಹಂಗಿಸುತ್ತಿದ್ದ ಶಿವಣ್ಣನ ಮಾತು ನೆನಪಾಗಿ ತಾಕಲಾಟದ ನಡುವೆ ಸಿಕ್ಕಿಸಿಕೊಂಡ ನಿಂಗಣ್ಣನು ಕೊನೆಗೂ ಊರೊಳಗಿನ ಐನೋರ ಅಂಗಡಿಗೆ ಹೋದವನು ಅತ್ತಗಿತ್ತಾಗಿ ನೋಡುತ್ತಾ 'ಸ್ವಾಮಿ, ಒಂದು ಕಟ್ ಬೀಡಿ ಕೊಡಿ' ಎಂದನು.

ಅಯ್ಯನೋರು ಇವನ ಮುಖ ಕಂಡಕೂಡಲೇ 'ಏನೋ ನಿಂಗ ಇತ್ತಗೆ ಬರೋದೇ ಬಿಟ್ಟೆ' ಅನ್ನುತ್ತ ಇವನ ಬೀಡಿ ಬ್ರಾಂಡ್ ಯಾವುದು ಎಂದು ಗೊತ್ತಿದ್ದಿದ್ದರಿಂದ ಇವನನ್ನ ಕೇಳದೆ ಬೀಡಿ ಕಟ್ಟು ಕೊಟ್ಟು ಐನೋರು ಉಳಿದ ಚಿಲ್ಲರೆಗಾಗಿ ಗಲ್ಲಾ ಪೆಟ್ಟಿಗೆ ತಡಕಾಡಿದರು. 'ಚಿಲ್ಲರೆ ಇಲ್ಲ ನಿಂಗ... ಆಮೇಲೆ ತಗಾ' ಅಂದರು. ಉಳಿದ ಕಾಸು ವಾಪಸ್ಸು ಕೊಡು ಎಂದು ಹೆಂಡತಿ ಹೇಳಿದ್ದು ನೆನಪಾಗಿ 'ಅಯ್ಯೋ ಬೇಕು ಸ್ವಾಮಿ, ನಮ್ಮವಳು ಅದೇನೋ ತಗಬೇಕು ಅಂದವಳೆ, ನಾನೇ ಚಿಲ್ಲರೆ ತಕ್ಕಬಂದು ಕೊಟ್ಟೇನು ಕೊಡಿ' ಅಂದನು.

ಇವನ ಕಾಸು ವಾಪಸ್ ಕೊಟ್ರೆ ಬೀಡೀ ಕಾಸೂ ಬರಲ್ಲ ಅನ್ನೋದ ಅರಿತ ಐನೋರು 'ಇರು ನಾನೇ ಕೊಡ್ತಿನಿ' ಎಂದು ಒಳಗೆ ಹೋದವರು ಚಿಲ್ಲರೆ ತಂದು, 'ಇಲ್ಲ ಅಂದುಬಿಟ್ಟೆ, ಇಲ್ನೋಡು ಇಲ್ಲೇ ಐತೆ' ಅಂತ ಚಿಲ್ಲರೆ ಕೊಟ್ಟು 'ಮಲ್ಲಂದು ಏನಾಯ್ತು?' ಎಂದರು. ಮುಂದುವರಿದು 'ಛೇ, ಅವನಿಗೆ ಈ ಸಮಯದಲ್ಲಿ ಹೀಗಾಗಬಾರದಿತ್ತು. ಚಂದ್ರ ಹೋದ ಆ ಬೇಜಾರಲ್ಲೇ ಇದ್ದ' ಎಂದು ಮಾತಾಡಿದರು.

'ಅದೇನ್ ಸ್ವಾಮಿ ಅದಕ್ಕೇನಾಗಿತ್ತು' ಎಂದು ನಿಂಗ ಸೋಜಿಗ ವ್ಯಕ್ತಪಡಿಸಿದ. ಆ ಮಾತಿಗೆ ಐನೋರು, 'ಏನಾಗಿತ್ತೋ ಏನೋ... ಮಲಗಿದ್ದ ಮಗ್ಗಲ್ಲೇ ಜೀವ ಹೋಗಿತ್ತಂತೆ' ಅಂದರು. ಮಲ್ಲನನ್ನ ಕುರಿತು ಹೆಚ್ಚಿಗೆ ಏನನ್ನೂ ಹೇಳದಿದುದನ್ನು ಕಂಡು 'ಊರು ವಿಷಯ ನಿಮಗೆ ತಿಳಿಯದೆ ನನಗೆ ತಿಳಿಯುತ್ತಾ? ನಾನು ನಿಮ್ಮನ್ನೇ ಕೇಳಬೇಕಂತ ಬಂದೆ, ಮಲ್ಲುಂದು ಏನಾರ ತಿಳಿತಾ ಸ್ವಾಮಿ?' ಎಂದ ನಿಂಗಣ್ಣನ ಮಾತಿಗೆ 'ಇಲ್ಲಿ ಆಗಲ್ಲ ಅಂದುಬಿಟ್ಟು ಬೆಂಗಳೂರಿಗೆ ಬರೆದುಕೊಟ್ಟವರಂತೆ' ಎಂದರು. ಅವರ ಮಾತಿಗೆ ನಿಂಗಣ್ಣ 'ನೀವು ಹೇಳ್ತಿರೋದು ಆಸ್ಪತ್ರೆಗೆ ಹೋಗಿದ್ದ ದಿನುದ್ದು, ಇದು ಎಲ್ಲರಿಗೂ ಗೊತ್ತು. ಈಗೇಳಿ, ಬೆಂಗಳೂರಿಗೆ ಏನಾರಾ ಹೋದ್ನೋ, ಜ್ಞಾನ ಏನಾರ ಬಂತೋ?' ಅಂತ ಕೇಳಿದ? 'ಇಲ್ಲ ಕಣೋ, ಅಂಗೇ ಅವನೆ, ಇವತ್ತೋ ನಾಳೆನೋ ಬೆಂಗಳೂರಿಗೆ ಕರ್ಕಂಡೋಗ್ತಾರಂತೆ, ಆ ಬುಡ್ಡಯ್ಯನ ಮಗ ಕಿರಿಯವನು ಸಿಟೀಲಿದಾನಲ್ಲಾ, ಅವನು ಸಿಕ್ಕಿ ಹೇಳ್ದ' ಎಂದವನು, ಅದೇನೋ ನೆನಪಾದವರಂತೆ 'ಸಿದ್ದನ ಮಗ ಸಿಕ್ಕುದ್ನ?' ಅಂತನೂ ಕೇಳಿದನು.

'ಅಯ್ಯೋ ಸ್ವಾಮಿ... ಅದೆಲ್ಲೋಯ್ತೋ ಏನೋ ಏನೂ ತಿಳಿವಲ್ದು. ನೀವೇನಾದರೂ ನೋಡಿ ಅದ್ಕೆ ಏನಾರಾ ಶಾಸ್ತ್ರ ಇದ್ರೆ ಮಾಡಿ

